ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 23.11.2024

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ. ಎಸ್ ಕೆ ಎನ್ ವಕೀಲರಿಂದಃ

ಈ ದಾವೆಯನ್ನು ನಾಗೇಶ್ ಬಿನ್ ವೆಂಕಟೇಶ್ ಎಂಬುವವರು ಸಲ್ಲಿಸಿದ್ದಾರೆ. ಸದರಿ ವೆಂಕಟೇಶ್ ರವರಿಗೆ ಮೂರು ಜನ ಮಕ್ಕಳು, ಅವುಗಳೆಂದರೆ ವಾದಿ ಮತ್ತು ಪ್ರತಿವಾದಿ 2 ಮತ್ತು 3 ಎಂದರೆ ಸರಿ. ಪ್ರತಿವಾದಿ 1 ವೆಂಕಟೇಶಪ್ಪ ರವರು ಸೋಣ್ಣಪ್ಪನ ಮಗ ಎಂದರೆ ಗೊತ್ತಿಲ್ಲ. ಸೊಣ್ಣಪ್ಪನಿಗೆ ಎಷ್ಟು ಜನ ಮಕ್ಕಳು ಗೊತ್ತಿಲ್ಲ. ಸೊಣ್ಣಪ್ಪನಿಗೆ ಎಷ್ಟು ಜನ ಮಕ್ಕಳು ಎಂದು ನನ್ನ ಪ್ರತಿವಾದ ಪತ್ರದಲ್ಲಿ ಮಾಹಿತಿ ಕೊಟ್ಟಿದ್ದೇನೆ ಆದರೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ.

ದಾವಾ ಸೊತ್ತುಗಳು ಮೂಲ ಸೊಣ್ಣಪ್ಪನಿಂದ 1 ನೇ ಪ್ರತಿವಾದಿಗೆ ಬಂದಿರುತ್ತವೆ ಎಂದರೆ ಸರಿ. ವಾದಿ ನಾಗೇಶ್ ರವರಿಗೆ ಆ ಸೊತ್ತುಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಆ ಸೊತ್ತುಗಳ ಕುರಿತು ವಾದಿ, ಅವರ ತಂದೆ ಮತ್ತು ಪ್ರತಿವಾದಿ 2 ಮತ್ತು 3 ರವರ ನಡುವೆ ಭಾಗವಾಗಿಲ್ಲ ಎಂದರೆ ಸರಿ. ಪ್ರತಿವಾದಿ 1 ವೆಂಕಟೇಶಪ್ಪ ರವರಿಂದ ವಂಶವೃಕ್ಷವನ್ನು ನಾನು ಪಡೆದಿದ್ದೇನೆ, ಆದರೆ ಅದು ನಾಡಕಚೇರಿ ವತಿಯಿಂದ ನೀಡಿರುವ ಬಗ್ಗೆ ಗೊತ್ತಿಲ್ಲ. ನಾನು ಆ ವಂಶವೃಕ್ಷವನ್ನು ಹಾಜರು ಮಾಡಿದ್ದೇನೆ. ವಾದಿ, ಪ್ರತಿವಾದಿ 2 ಮತ್ತು 3 ರವರ ಜನ್ಮ ದಿನಾಂಗಳ ಕುರಿತು ದಾಖಲಾತಿಗಳನ್ನು ನಾನು ನೋಡಿಲ್ಲ. ಸಬ್ ರಿಜಿಸ್ಟರ್ ಕಚೇರಿಯಲ್ಲಿ, ವಾದಿ , ಪ್ರತಿವಾದಿ 2 ಮತ್ತು 3 ರವರುಗಳನ್ನು ನೋಡಿದ್ದೆ. ಆ ರೀತಿ ಅವರನ್ನು ನೋಡಿದಾಗ ಅವರೇ ಆ ವ್ಯಕ್ತಿಗಳಾಗಿರುತ್ತಾರೆ ಎಂಬ ಬಗ್ಗೆ ನಾನು ಐಡಿ ದಾಖಲೆಗಳನ್ನು ನೋಡಲಿಲ್ಲ, ಆದರೆ ವೆಂಕಟೇಶಪ್ಪರವರು ಕರೆದುಕೊಂಡು ಬಂದಿದ್ದರಿಂದ ಅವರ ಮಕ್ಕಳೆಂದು ನಾನು ತಿಳಿದುಕೊಂಡಿದ್ದೇನೆ. ಸಬ್ ರಿಜಿಸ್ಟರ್ ಕಚೇರಿಯಲ್ಲಿ ಹೊರತು ಪಡಿಸಿ ಆ ಮೊದಲು ಮತ್ತು ಆ ನಂತರ ವಾದಿಯನ್ನು ನೋಡಿಲ್ಲ. ಈಗ ವಾದಿ ನಾಗೇಶ್ ರವರನ್ನು

ನೋಡಿ ಗುರುತಿಸಲು ಆಗುವುದಿಲ್ಲ. ನಾನು ವಾದಿಯನ್ನು ನೋಡಿಲ್ಲ, ಆದ್ದರಿಂದ ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರು ನನಗೆ ಜಿ. ಪಿ. ಎ. ದಾಖಲೆಯನ್ನು ಮಾಡಿಕೊಟ್ಟಿದ್ದಾರೆ, ಆದರೆ ಅದರ ದಿನಾಂಕ ಗೊತ್ತಿಲ್ಲ. ಜಿ. ಪಿ. ಎ. ದಾಖಲೆ ನಿಡಿ 1 ಆಗುವ ಮೊದಲು 1 ತಿಂಗಳ ಮುಂಚೆ ಪ್ರತಿವಾದಿ 1 ರವರನ್ನು ಬೇಟಿ ಮಾಡಿದ್ದೆ. ಜಿ. ಪಿ. ಎ. ದಾಖಲೆ ನಿಡಿ 1 ಆಗುವ ಮೊದಲು 1 ನೇ ಪ್ರತಿವಾದಿ ಸೊತ್ತಿನ ದಾಖಲೆಯನ್ನು ನನಗೆ ಕೊಟ್ಟಿದ್ದರು. ಹನುಮಪ್ಪ ಮತ್ತು ಸುಬ್ರಹ್ಮಣಿ ಎಂಬುವವರು ಮಧ್ಯಸ್ಥಿಕೆ ವಹಿಸಿದ್ದರು, ಹನುಮಪ್ಪ ರವರ ವಿಜಯಪುರದವರು, ಸುಬ್ರಹ್ಮಣಿರವರು ಆರ್ ಟಿ ನಗರ ಬೆಂಗಳೂರುರವರಾಗಿದ್ದಾರೆ. ಜಿ. ಪಿ. ಎ. ದಾಖಲೆ ಆಗುವ ಮೊದಲು ಪಡೆದ ದಾಖಲೆಯನ್ನು ಹಾಜರು ಮಾಡಿದ್ದೇನೆ. ಆ ದಾಖಲೆಗಳು ಏನೂ ಎಂಬುದು ಈಗ ಗೊತ್ತಿಲ್ಲ. ಜಿ. ಪಿ. ಎ. ದಾಖಲೆ ನಿಡಿ 1 ನ್ನು ಬೆಂಗಳೂರಿನಲ್ಲಿ ವಕೀಲರು ಮಾಡಿಸಿದ್ದರು. ಅದನ್ನು ಟೈಪ್ ಮಾಡಿಸಿದ ದಿನಾಂಕ ಗೊತ್ತಿಲ್ಲ. ಅದರ ವಿಚಾರಗಳನ್ನು ನಮ್ಮ ವಕೀಲರೆ ಹೇಳಿ ಮಾಡಿಸಿದ್ದರು.

ದಾವಾ ಸೊತ್ತು ಎಷ್ಟು ಮೊತ್ತ ಹಣಕ್ಕೆ ವ್ಯಾಪಾರವಾಗಿತ್ತು ಎಂಬುದು ಮರೆತು ಹೋಗಿದೆ. ನಾನು ರೂ. 25 ಲಕ್ಷ ಹಣವನ್ನು ಪ್ರತಿವಾದಿ 1 ಮತ್ತು ಅವರ ಕುಟುಂಬದವರಿಗೆ ಕೊಟ್ಟಿದ್ದೇನೆ. ಆ ಹಣವನ್ನು ಚೆಕ್ ಮತ್ತು ಡಿಡಿ ಮೂಲಕ ಕೊಟ್ಟಿದ್ದೆ. ಚೆಕ್ ಮತ್ತು ಡಿಡಿ ನನ್ನ ಬ್ಯಾಂಕ್ ಖಾತೆಗೆ ಆದಂತೆ ತೆಗೆದಿರುತ್ತೇನೆ. ಅದರ ಬಗ್ಗೆ ದಾಖಲೆ ಹಾಜರು ಮಾಡಲು ತೊಂದರೆ ಇಲ್ಲ. ಜಿ. ಪಿ. ಎ. ದಾಖಲೆ ನಿಡಿ 1 ಆದಾ ದಿನದಂದೇ ಮೇಲೆ ಹೇಳಿದ ಹಣವನ್ನು ಕೊಟ್ಟಿದ್ದೇನೆ. ಜಿ. ಪಿ. ಎ. ದಾಖಲೆ ನಿಡಿ 1 ದಾಖಲೆಯಲ್ಲಿ ಆ ಹಣ ಕೊಟ್ಟಿರುವ ನಮೂದು ಇರುವ ಬಗ್ಗೆ ಗೊತ್ತಿಲ್ಲ. ಆ ಹಣದ ಬಗ್ಗೆ ನಮೂದು ಇದೆ ಅಥವಾ

ಇಲ್ಲ ಎಂಬ ಬಗ್ಗೆ ನಾನು ಜಿ. ಪಿ. ಎ. ದಾಖಲೆ ನಿಡಿ 1 ದಾಖಲೆಯಲ್ಲಿ ನೋಡಲಿಲ್ಲ. ಸದರಿ ಹಣವನ್ನು ನಾನು ಶಿಡ್ಲಘಟ್ಟ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಕೊಟ್ಟಿದ್ದೇನೆ. ಆ ಕಚೇರಿಯಲ್ಲಿ ಹೊರತು ಪಡಿಸಿ ಬೇರೆ ಕಡೆಯಲ್ಲಿ ಹಣವನ್ನು ಪ್ರತಿವಾದಿ 1 ಮತ್ತು ಅವರ ಕುಟುಂಬಕ್ಕೆ ಕೊಟ್ಟಿರುವ ಬಗ್ಗೆ ಸರಿಯಾಗಿ ನನಗೆ ನೆನಪಿಲ್ಲ. ಬೇರೆ ಕಡೆ ಹಣವನ್ನು ಕೊಟ್ಟಿರುವ ದಾಖಲಾತಿ ಇಲ್ಲ. ಜಿ. ಪಿ. ಎ. ದಾಖಲೆ ನಿಡಿ 1 ದಾಖಲೆ ಶಿಡ್ಲಘಟ್ಟ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಎಷ್ಟು ಸಮಯದಲ್ಲಿ ರಿಜಿಸ್ಟರ್ ಆಗಿತ್ತು ಎಂಬುದು ನೆನಪಿಲ್ಲ. ಆ ದಾಖಲೆ ರಿಜಿಸ್ಟರ್ ಗೆ ಎಷ್ಟು ಸಮಯಕ್ಕೆ ಹೋಗಿ ಮತ್ತು ಎಷ್ಟು ಸಮಯದಲ್ಲಿ ಮುಗಿಯಿತು ಎಂಬು ನೆನಪಿಲ್ಲ. ರಿಜಿಸ್ಟರ್ ಆದ ಮೇಲೆ  ಮಾತು ಕತೆ ಅಥವಾ ಬೇಟಿಯಾಗಿಲ್ಲ. ಜಿ. ಪಿ. ಎ. ದಾಖಲೆ ನಿಡಿ 1 ದಾಖಲೆಯಲ್ಲಿ ಕಾಣಿಸಿರುವ ಸೊತ್ತಿನ ಕುರಿತು ಆ ದಿನ ನೊಂದಾಯಿತ ಕ್ರಯವಾಗಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ಆ ಸಮಯದಲ್ಲಿ ಸದರಿ ಸೊತ್ತು ಕುರಿತು Land Acquisition ಆಗುತ್ತದೆ ಎಂದು ವಿಚಾರ ತಿಳಿದು ನಾನು ಕ್ರಯ ಮಾಡಿಕೊಳ್ಳಲಿಲ್ಲ ಆ ರೀತಿ ವಿಚಾರವು ಜಿ. ಪಿ. ಎ. ದಾಖಲೆ ನಿಡಿ 1 ದಾಖಲೆ ಆದ ಮೇಲೆ ಗೊತ್ತಾಯಿತು. ಆ ವಿಚಾರ ಎರಡು ದಿನವಾದ ಮೇಲೆ ಗೊತ್ತಾಯಿತು.

<u>ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.</u>

<u>ಮರು ವಿಚಾರಣೆಃ ಇಲ್ಲಃ</u>

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು  ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಶಿಡ್ಲಘಟ್ಟ.